**ಮೂ.ದಾ.ನಂ. 94/2019**

ಪಿ.ಡಬ್ಲ್ಯು 1

(ಇಂದು ದಿನಾಂಕ: **23-09-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಬಿ.ಡಿ.ಎಸ್. ವಕೀಲರಿಂದಃ**

ನಮ್ಮ ಕುಟುಂಬದ ಪಡಿತರ ಚೀಟಿಯಲ್ಲಿ ನನ್ನ ತಂದೆಯವರ ಹೆಸರು ನಮೂದು ಇತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರಾಯಸ್ಥನಾದ ಸಂದರ್ಭದಲ್ಲಿ ನಮ್ಮ ಕುಟುಂಬದ ಪಡಿತರ ಚೀಟಿಯಲ್ಲಿ ನಮ್ಮ ತಂದೆಯವರ ಹೆಸರು ನಮೂದು ಇತ್ತು. ನಾವು ಪ್ರಾಯಸ್ಥರಾದಾಗ ನಮ್ಮ ವಾಸ್ತವ್ಯವು ನಮ್ಮ ಅಜ್ಜಿ ಮನೆಯಾದ ಹೆಗಡೆಯಲ್ಲಿ ಇತ್ತು. ಸದ್ರಿ ಸಂದರ್ಬದಲ್ಲಿ ನಮ್ಮ ರೇಶನ ಕಾರ್ಡ ಹೆಗಡೆ ಗ್ರಾಮದಲ್ಲಿ ಇರಲಿಲ್ಲ. ಪ್ರಪ್ರಥಮ ಬಾರಿಗೆ ಮಂಚಿಕೇರೆಗೆ ಮಾಡಿಕೊಂಡಿರುತ್ತೇವೆ. ಸದ್ರಿ ಪಡಿತರ ಚೀಟಿಯಲ್ಲಿ ನಮ್ಮ ತಂದೆಯವರ ಹೆಸರು ಇರಲಿಲ್ಲ.

ಬೆಟ್ಕುಳಿ ಗ್ರಾಮದ ಹೊಸಬಯ್ಯ ನಾಯ್ಕ ಇವರು ಮರಣ ಹೊಂದಿರುವುದು ನಮಗೆ ದಿಃ 15/05/2010 ರಂದು ತಿಳಿದಿರುತ್ತದೆ. ಸದ್ರಿ ಸಂದರ್ಭದಲ್ಲಿ ನಾವು ಹಾಜರ ಇದ್ದೇವು. ಆ ಸಂದರ್ಭದಲ್ಲಿ ಅಂತ್ಯಕ್ರಿಯೇಯನ್ನು ನಾನು ಹಾಗೂ ನನ್ನ ಅಣ್ಣನವರು ಸೇರಿ ನಡೆಸಿದ್ದೇವೆ. ಸದ್ರಿ ಸಂದರ್ಭದಲ್ಲಿ ಊರಿನವರು ಸೇರಿ ಎಲ್ಲರೂ ಸೇರಿ ಸುಮಾರು 18 ಜನರು ಇದ್ದರು. ಸದ್ರಿ ಸಂದರ್ಭದಲ್ಲಿ ಜನಾರ್ಧನ ನಾಯ್ಕ ರವರು ಇದ್ದರು. ಜನಾರ್ಧನ ನಾಯ್ಕ ಎಂದರೆ ಸುಬ್ಬಯ್ಯ

**ಮೂ.ದಾ.ನಂ. 94/2019**

ಪಿ.ಡಬ್ಲ್ಯು.1

ಅಪ್ಪಯ್ಯ ನಾಯ್ಕ ಇವರ ಮಗನಾಗಿರುತ್ತಾನೆ. ಮೃತ ಹೊಸಬಯ್ಯಾ ನಾಯ್ಕ ಇವರು ಜನಾರ್ಧನ ಇವರಿಗೆ ಚಿಕ್ಕಪ್ಪನಾಗಿರುತ್ತಾರೆ ಎಂದರೆ ಸರಿ.

ದಾವಾಸ್ತಿಗಳ ದಾಖಲಾತಿಯನ್ನು ನಾನು 2019 ರಲ್ಲಿ ಪಡೆದುಕೊಂಡಿರುತ್ತೇನೆ. ನಾನು 2010 ರಂದು ಅಂತ್ಯಕ್ರಿಯೇಗೆ ಬಂದಿದ್ದೇನೆ ಎನ್ನಲಾದ ಸಂದರ್ಭದಲ್ಲಿ ಇಷ್ಟು ಆಸ್ತಿಗಳು ಇದ್ದವು ಎನ್ನುವ ಕುರಿತಾಗಿ ನನಗೆ ಮಾಹಿತಿ ಇರಲಿಲ್ಲ. ಸದ್ರಿ ಸಂದರ್ಭದಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂಬುವುದು ನನ್ನ ತಿಳುವಳಿಕೆಯಲ್ಲಿ ಇರಲಿಲ್ಲ. ನಾನು ಅಂತ್ಯಕ್ರಿಯೇಗೆ ಬಂದಂತಹ ಸಂದರ್ಭದಲ್ಲಿ 1 ಎಕರೆ ಆಸ್ತಿ ಇರುವ ಕುರಿತಾಗಿ ನನಗೆ ಮಾಹಿತಿ ಇತ್ತು.

2010 ಮೇ ನಲ್ಲಿ ಮರಣ ಆದಂತಹ ಸಂದರ್ಭದಲ್ಲಿ ನನಗೆ ತಿಳಿದಿರುವ 1 ಎಕರೆ ಆಸ್ತಿಗೆ ವಾರಿಸಾ ಅರ್ಜಿಯನ್ನು ನೀಡಲು ನನ್ನ ದೊಡ್ಡಪ್ಪನ ಮಗನ ಬಳಿ ಕೇಳಿರುತ್ತೇನೆ. ಆಗ ನಾನು ಅರ್ಜಿಯನ್ನು ನೀಡಿರುವುದಿಲ್ಲ. ದಾವಾಸ್ತಿಗಳು ಏಲ್ಲೇಲ್ಲಿ ಇವೆ ಹಾಗೂ ಅವುಗಳ ಚತುರ್ಗಡಿಗಳ ಕುರಿತಾಗಿ ನನಗೆ ಮಾಹಿತಿ ಇರುವುದಿಲ್ಲ.

ಸುಬ್ಬಯ್ಯ ಹೊಸಬಯ್ಯಾ ನಾಯಕನು ನಾನು ಚಿಕ್ಕವರಿರುವಾಗಲೀ ಮರಣ ಹೊಂದಿರುತ್ತಾರೆ. ದಾವಾಸ್ತಿಗಳ ಕುರಿತಾಗಿ ನಾನು 2019 ರಲ್ಲಿ ಕಂದಾಯ ಇಲಾಖೆಗಳಲ್ಲಿ ದಾಖಲೆಗಗಳನ್ನು ಪಡೆದುಕೊಂಡ ನಂತರವೇ ತಿಳಿದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು 1 ಎಕರೆ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಗಳನ್ನು ಸದ್ರಿ ಸಂದರ್ಭದಲ್ಲಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ಬೆಟ್ಕುಳಿ ಗ್ರಾಮದ ಸಆವೆ ನಂಬರ 3 ಹಿಸ್ಸಾ 1 ಆಸ್ತಿಯು ಹೊಸಬಯ್ಯಾ ಅಪ್ಪಯ್ಯಾ ನಾಯ್ಕ ಇವರ ಸ್ವಂತ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬರ್ಗಿ ಗಜನಿ ಗ್ರಾಮದ ಸರ್ವೆ ನಂಬರ 67 ಹಿಸ್ಸಾ 5 ಆಸ್ತಿಯು ಸುಬ್ಬಯ್ಯಾ ಅಪ್ಪಯ್ಯಾ ನಾಯಕ ಇವರ ಸ್ವಂತ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾಸ್ತಿಯಾದ ಬೆಟ್ಕುಳಿ ಗ್ರಾಮದ ಸರ್ವೆ ನಂಬರ 183 ಯಾರ ಆಸ್ತಿ ಎಂದರೆ ಸಾಕ್ಷಿಯು ನನ್ನ ತಂದೆಯಾದ ಹೊಸಬಯ್ಯ ಅಪ್ಪಯ್ಯ ನಾಯ್ಕ ಇವರ ಆಸ್ತಿ ಎಂದು ನುಡಿಯುತ್ತಾರೆ. ಬೆಟ್ಕುಳಿ ಗ್ರಾಮದ ಸರ್ವೆ ನಂಬರ 183ರ ಆಸ್ತಿಗೆ ಸಂಬಧಿಸಿದಂತೆ ಹೊಸಬಯ್ಯ ಅಪ್ಪಯ್ಯ ನಾಯ್ಕ ಅವರ ಕುಟುಂಬದ ನಡುವೆ ಹಾಗೂ ಜನಾರ್ಧನ ನಾಯ್ಕ ಇವರ ನಡುವೆ 1990 ರಲ್ಲಿ ವಾಂಟಣಿ ಆಗಿತ್ತು ಎಂದರೆ ಸರಿ. ವಾಂಟಣಿ ಸಂದರ್ಭದಲ್ಲಿ ಜನಾರ್ಧನ ನಾಯ್ಕ ಇವರಿಗೆ ಅರ್ಧ ಅಂಶ ಆಸ್ತಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

1 ರಿಂದ 3ನೇ ಪ್ರತಿವಾದಿ ಹಾಗೂ ಹೊಸಯ್ಯಾ ಇವರಿಗೆ ಯಾವ ರೀತಿಯ ಸಂಬಂಧ ಎಂದು ನನಗೆ ತಿಳಿದಿಲ್ಲ. ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಹೊಸಬಯ್ಯಾ ಇವರ ಕುಟುಂಬಕ್ಕೆ ಸಂಬಂಧಿಸಿದಂತಹ ದಾಖಲಾತಿಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. 1990 ರಲ್ಲಿ ವಾಂಟಣಿಯ ದಾಖಲಾತಿಗಳನ್ನು ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ನೋಡಿರುತ್ತೇನೆ. ಸದ್ರಿ ವಾಂಟಣಿಯ ಸಂದರ್ಭದಲ್ಲಿ 1 ರಿಂದ 3 ನೇ ಪ್ರತಿವಾದಿಯರಿಗೆ ಹಾಗೂ 4 ನೇ ಪ್ರತಿವಾದಿಯರಿಗೆ ನೀಡಿದ್ದು 1 ರಿಂದ 3ನೇ ಪ್ರತಿವಾದಿ ಹಾಗೂ ಹೊಸಬಯ್ಯನ ನಡುವೆ

ಯಾವ ಸಂಬಂಧದ ಬಗ್ಗೆ ಬರೆದಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿ ಹಾಗೂ ಹೊಸಯ್ಯಾ ಇವರ ಸಂಬಂಧ ಯಾವ ರೀತಿಯದ್ದು ಎಂಬ ಬಗ್ಗೆ ಸದ್ರಿ ವಾಂಟಣಿ ದಸ್ತಾವೇಜಿನಲ್ಲಿ ನಮೂದಾಗಿದ ಕುರಿತು ತನಗೆ ಗೊತ್ತಿಲ್ಲ.

ಹೊಸಯ್ಯಾ ಆತನ ಜೀವಿತಾವಧಿಯಲ್ಲಿ ಬೆಟ್ಕುಳಿ ಗ್ರಾಮದಲ್ಲಿ ವಾಸ್ತವ್ಯದಲ್ಲಿ ಇದ್ದು, ಆತನ ಮನೆ ನಂಬರ ತನಗೆ ತಿಳಿದಿರುವುದಿಲ್ಲ. ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ಬೆಟ್ಕುಳಿ ಗ್ರಾಮದಲ್ಲಿ ಸದ್ರಿ ಮನೆ ಇತ್ತು. ಸದ್ರಿ ಮನೆಯಲ್ಲಿ 1 ರಿಂದ 3ನೇ ಪ್ರತಿವಾದಿಯರು ಇದ್ದರು. ನಾನು 1 ರಿಂದ 3ನೇ ಪ್ರತಿವಾದಿಯರಲ್ಲಿ ಹೊಸಬಯ್ಯನ ಜೊತೆ ಅವರ ಸಂಬಂಧದ ಕುರಿತಾಗಿ ವಿಚಾರಿಸಿರುತ್ತೇನೆ. ಅರು ಯಾವ ಸಂಬಂಧವನ್ನು ಹೊಂದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಸಂಬಂಧದ ಬಗ್ಗೆ ಯಾವುದೇ ವಿಷಯವನ್ನು ತಿಳಿಸದೇ ಇದ್ದು, ಇದು ನಮ್ಮ ಆಸ್ತಿ ಎಂದು ತಿಳಿಸಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಯವರೊಂದಿಗೆ ಹೊಸಬಯ್ಯನ ಸಂಬಂಧವು ಯಾವ ರೀತಿಯದ್ದು ಎಂಬ ಬಗ್ಗೆ 4ನೇ ಪ್ರತಿವಾದಿಯನ್ನು ಹಾಗೂ ಊರಿನ ಜನರೊಂದಿಗೆ ಕೇಳಿರುತ್ತೇನೆ. 1 ರಿಂದ 3ನೇ ಪ್ರತಿವಾದಿಯರು ಹೊಸಬಯ್ಯನ ಮಕ್ಕಳು ಎಂದು 4ನೇ ಪ್ರತಿವಾದಿಯರು ಹೇಳಿರುತ್ತಾರೆ. ಅನಂತರದಲ್ಲಿ ಅವರು ಸದ್ರಿ ಮನೆಯಲ್ಲಿ ವಾಸ್ತವ್ಯದಲ್ಲಿ ಇದ್ದ ಕುರಿತಾಗಿ ನಾನು ಪೊಲೀಸ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ.

ದಾವಾಸ್ತಿಗಳು ಈಗ ಸ್ವಲ್ಪ ಮಟ್ಟಿಗೆ 4ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿದ್ದಾನೆ. ಉಳಿದ ಆಸ್ತಿಯನ್ನು 1 ರಿಂದ 3ನೇ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದಾರೆ. ದಾವಾಸ್ತಿಗಳು 1990 ರ

**ಮೂ.ದಾ.ನಂ. 94/2019**

ಪಿ.ಡಬ್ಲ್ಯು.1

ವಾಂಟಣಿ ಪತ್ರದಲ್ಲಿ ವಿಂಗಡಣೆ ಆಗುವ ಪೂರ್ವದಲ್ಲಿ ಯಾವ ಸ್ಥಿತಿಯಲ್ಲಿ ಇದ್ದವು ಹಾಗೂ ನಂತರದಲ್ಲಿ ಯಾವ ಸ್ಥಿತಿಯಲ್ಲಿ ಇದ್ದವು ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ